

# ಆ್ಯಕ್ಷನ್ ಪ್ರಿಯೆ ಶಾನ್ವಿ

ಆ್ಯಕ್ಷನ್ ಸಿನಿಮಾದಲ್ಲಿ ನಟಿಸಬೇಕೆಂಬ ತಮ್ಮ ಬಹುದಿನಗಳ ಆಸೆಯನ್ನು 'ಬ್ಯಾಂಗ್' ಸಿನಿಮಾ ಮೂಲಕ ಪೂರೈಸಿಕೊಂಡಿದ್ದಾರೆ ನಟಿ ಶಾನ್ವಿ ಶ್ರೀವಾತ್ಸವ್.

ಈಚೆಗೆ ಬಿಡುಗಡೆ ಕಂಡಿರುವ ಬ್ಯಾಂಗ್ ಸಿನಿಮಾದ ಆ್ಯಕ್ಷನ್ ದೃಶ್ಯಗಳಲ್ಲಿ ಗಮನ ಸೆಳೆದಿದ್ದಾರೆ ಶಾನ್ವಿ. ಸಿನಿಮಾದಲ್ಲಿ ಗ್ಯಾಂಗ್‌ಸ್ಟರ್ ಆಗಿ ಕಾಣಿಸಿಕೊಂಡಿರುವ ಅವರು, ಈ ಸಿನಿಮಾ ತಮ್ಮನ್ನು ತಾವು ಎಕ್ಸ್‌ಪ್ಲೋರ್ ಮಾಡಿಕೊಳ್ಳಲು ಒಳ್ಳೆಯ ಅವಕಾಶ ನೀಡಿರುವುದಾಗಿ ಹೇಳಿಕೊಂಡಿದ್ದಾರೆ.

ಇದೇ ಸಂದರ್ಭ, ಮಹಿಳೆಯರಿಗೆಂದೇ ಆ್ಯಕ್ಷನ್ ಆಧರಿತ ಸಿನಿಮಾ, ಪಾತ್ರಗಳು ಹೆಚ್ಚು ಸೃಷ್ಟಿಯಾಗುತ್ತಿಲ್ಲವೆಂದೂ ಹೇಳಿದ್ದಾರೆ.

'ಸಾಮಾನ್ಯವಾಗಿ ಮಹಿಳೆಯರಿಗೆ ಸಾಫ್ಟ್ ರೋಲ್‌ಗಳನ್ನು ಮಾತ್ರ ನೀಡಲಾಗುತ್ತದೆ. ಸಿನಿಮಾದಲ್ಲಿ ನಾಯಕನೊಂದಿಗೆ ಸುಂದರವಾಗಿ ಕಂಡರೆ ಸಾಕು ಎಂಬಂತೆ ಹೀರೊಯಿನ್‌ಗಳನ್ನು ಬಿಂಬಿಸಲಾಗುತ್ತದೆ. ನಟಿಯರನ್ನು ಆ್ಯಕ್ಷನ್ ಆಧರಿತ ಪಾತ್ರಗಳಿಗೆ ನಿರ್ದೇಶಕರು ಪರಿಗಣಿಸುವುದೇ ಕಡಿಮೆ. ಮಹಿಳೆಯರಿಗೆ ಆ್ಯಕ್ಷನ್ ಆಧರಿತ ಪಾತ್ರಗಳು ಸೃಷ್ಟಿಯಾಗುವುದೇ ಅಪರೂಪ. ಆದರೆ ಈಗೀಗ ಸಿನಿಮಾರಂಗದಲ್ಲಿ ಹೆಚ್ಚು ಪ್ರಯೋಗಗಳು ನಡೆಯುತ್ತಿವೆ. ಈ ಪ್ರಯೋಗಗಳು ಆತ್ಮವಿಶ್ವಾಸವನ್ನೂ ತುಂಬುತ್ತಿವೆ' ಎಂದಿದ್ದಾರೆ.

ಜೊತೆಗೆ, ಬ್ಯಾಂಗ್ ಸಿನಿಮಾದಲ್ಲಿ ತಮಗೆ ಆ್ಯಕ್ಷನ್ ಪಾತ್ರ ಸಿಕ್ಕಿದ್ದಕ್ಕೆ ಸಂತಸವನ್ನೂ ವ್ಯಕ್ತಪಡಿಸಿದ್ದಾರೆ. ಸಿನಿಮಾದಲ್ಲಿ ಸ್ಟಂಟ್‌ಗಳನ್ನು ಶಾನ್ವಿ ಸ್ವತಃ ಮಾಡಿದ್ದು, ಶೂಟಿಂಗ್ ಆರಂಭವಾಗುವ ಮುನ್ನ ಸಮರ ಕಲೆಯ ತರಬೇತಿಯನ್ನೂ ಪಡೆದುಕೊಂಡಿದ್ದಾರಂತೆ.

'ಮುಂಚಿನಿಂದಲೂ ಆ್ಯಕ್ಷನ್ ಸಿನಿಮಾಗಳಲ್ಲಿ ನಟಿಸುವ ಬಯಕೆ ಇತ್ತು. ಜೊತೆಗೆ ಭಯವೂ ಇತ್ತು. ಆದರೆ ಕಥೆ ಕೇಳಿ ಒಪ್ಪಿದೆ. ನಮಗೆ ಸಮಯ ತುಂಬಾ ಕಡಿಮೆ ಇತ್ತು. ಆದರೆ ಈ ಪಾತ್ರಕ್ಕೆ ಅವಶ್ಯಕವಾದ ಸ್ಟಂಟ್, ಕಿಕ್‌ಗಳನ್ನು ಕಲಿಯಲೇಬೇಕಿತ್ತು. ಇದನ್ನು ಕಲಿಯಲು ಆರಂಭಿಸಿದ ನಂತರ ಆ್ಯಕ್ಷನ್, ಸಮರ ಕಲೆಯನ್ನು ಪ್ರೀತಿಸಲು ಶುರು ಮಾಡಿದ್ದೇನೆ' ಎಂದಿದ್ದಾರೆ.

ಚಿತ್ರರಂಗಕ್ಕೆ ಬಂದು ದಶಕ ಕಳೆದಿರುವ ಶಾನ್ವಿ ಶ್ರೀವಾತ್ಸವ್, ಸಾಕಷ್ಟು ಸೂಪರ್ ಹಿಟ್ ಸಿನಿಮಾಗಳನ್ನು ನೀಡಿದ್ದಾರೆ. ಸಿನಿಮಾರಂಗಕ್ಕೆ ಕಾಲಿಟ್ಟು ಹನ್ನೊಂದು ವರ್ಷಗಳಾಗಿದ್ದು, ಇಲ್ಲಿ ಗುರುತಿಸಿಕೊಂಡಿರುವುದಕ್ಕೆ ಖುಷಿಯನ್ನೂ ವ್ಯಕ್ತಪಡಿಸಿದ್ದಾರೆ.

# ಅಧಿಪತ್ರ; ರೂಪೇಶ್ ಶೆಟ್ಟಿ ಹೊಸ ಅಧ್ಯಾಯ



ಡೇಂಜರ್ ಝೋನ್, ನಿಶ್ಶಬ್ದ 2, ಅನುಷ್ಕಾ ಸೇರಿದಂತೆ ಹಲವು ಚಿತ್ರಗಳಲ್ಲಿ ನಟಿಸಿರುವ ರೂಪೇಶ್ ಶೆಟ್ಟಿ, ಈಗ 'ಅಧಿಪತ್ರ' ಮೂಲಕ ಹೊಸ ಪಥದ ಕಥೆಯೊಂದಿಗೆ ಬರುವ ಸಿದ್ಧತೆ ನಡೆಸುತ್ತಿದ್ದಾರೆ. ಸೆಪ್ಟೆಂಬರ್ ತಿಂಗಳಿನಿಂದ ಸಿನಿಮಾ ಚಿತ್ರೀಕರಣವೂ ಆರಂಭಗೊಳ್ಳುತ್ತಿದೆ.

'ಬಿಗ್ ಬಾಸ್' ರಿಯಾಲಿಟಿ ಶೋ ನಂತರ ಜನಪ್ರಿಯತೆ ಗಳಿಸಿ, ಮನೆ ಮಾತಾಗಿದ್ದ ನಟ ರೂಪೇಶ್ ಶೆಟ್ಟಿ, 'ಸರ್ಕಸ್' ಎಂಬ ತುಳು ಸಿನಿಮಾದ ನಿರ್ದೇಶನ, ನಿರ್ಮಾಣ, ನಟನೆಯನ್ನೂ ಮಾಡಿದ್ದರು. ಆ ಸಿನಿಮಾ 50 ದಿನಗಳನ್ನು ಪೂರೈಸಿದ್ದು, ಅದರ ಬೆನ್ನಲ್ಲೇ ಮತ್ತೊಂದು ಹೊಸ ಹೆಜ್ಜೆ ಇಡಲು ಅಣಿಯಾಗಿದ್ದಾರೆ. ರೂಪೇಶ್ ಅವರ ಹುಟ್ಟುಹಬ್ಬದ ದಿನದಂದು ಹೊಸ ಸಿನಿಮಾದ ಶೀರ್ಷಿಕೆ ಅನಾವರಣಗೊಂಡಿದೆ.

ಹೊಸ ಸಿನಿಮಾ 'ಅಧಿಪತ್ರ', ಕನ್ನಡ ಸಿನಿಮಾರಂಗದಲ್ಲಿ ತಮಗೆ ಹೊಸ ಅಧ್ಯಾಯವಾಗುವ ಹುಮ್ಮಸ್ಸಿನಲ್ಲಿದ್ದಾರೆ ರೂಪೇಶ್. ಚಯನ್ ಶೆಟ್ಟಿಗೆ ಇದು ಸ್ವತಂತ್ರ ನಿರ್ದೇಶನದ ಚೊಚ್ಚಲ ಅನುಭವ. ಹಾಗೆಂದು ಸಿನಿಮಾರಂಗಕ್ಕೇನು ಅವರು ಹೊಸಬರಲ್ಲ. ಈ ಹಿಂದೆ ಅವರು ಸಹಾಯಕ ನಿರ್ದೇಶಕರಾಗಿ ಕೆಲವು ಸಿನಿಮಾಗಳಿಗೆ ಕೆಲಸ ಮಾಡಿದ್ದಾರೆ. ತಮ್ಮ ಮೊದಲ ಚಿತ್ರವನ್ನು ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನಲ್ಲಿ ರೂಪಿಸುತ್ತಿದ್ದಾರೆ. ಕೆ.ಆರ್.ಸಿನಿಕಂಬೈನ್ಸ್ ಬ್ಯಾನರ್‌ನಡಿಯಲ್ಲಿ 'ಅಧಿಪತ್ರ' ತಯಾರಾಗುತ್ತಿದೆ. 'ಗಿಚ್ಚಿ ಗಿಲಿಗಿಲಿ' ಶೋ ಮೂಲಕ ಕನ್ನಡ ಕಿರುತೆರೆ ಪ್ರೇಕ್ಷಕರಿಗೆ ಚಿರಪರಿಚಿತರಾಗಿರುವ ಜಾಹ್ನವಿ ಸಿನಿಮಾಗೆ ನಾಯಕಿಯಾಗಿದ್ದಾರೆ.

ಸೆಪ್ಟೆಂಬರ್ ತಿಂಗಳಲ್ಲಿ ಸಿನಿಮಾ ಶೂಟಿಂಗ್ ಆರಂಭವಾಗಲಿರುವುದಾಗಿ ಚಿತ್ರತಂಡ ಮಾಹಿತಿ ನೀಡಿದೆ. ರೂಪೇಶ್ ಕೂಡ ತಮ್ಮ ಪಾತ್ರಕ್ಕೆ ತಕ್ಕ ಸಿದ್ಧತೆಯಲ್ಲಿ ತೊಡಗಿದ್ದಾರೆ. ■